**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು**

**ಸಿ.ಸಿ. ನಂ: 163/2021**

**ದಿನಾಂಕ: 13-05-2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.**

**ಡಿ.ಡಬ್ಲ್ಯೂ : 01**

**ಮುಂದುವರೆದ ಪಾಟೀ ಸವಾಲುಃ ದೂರುದಾರರ ಪರ ಶ್ರೀ ಎ.ವಿ.ಕೆ ವಕೀಲರಿಂದಃ**

ನನ್ನ ಕಳೆದು ಹೋದ ಚೆಕ್ ಎಲ್ಲಿ ಇದೆ ಎಂದು ಪ್ರಶ್ನೇಗೆ ಸಾಕ್ಷಿಯು ನಮ್ಮ ಮನೆಗೆ ಪಂಚನಾಮೆ ಮಾಡಲು ಬಂದಾಗ ಆ ಸಮಯದಲ್ಲಿ ನನ್ನ ಚೆಕ್ ಕಳೆದು ಹೋಗಿರುತ್ತದೆ. ಪಂಪಾಪತಿರವರು ಪೊಲೀಸ್‌ರ ಸಮಕ್ಷಮ ಪಂಚನಾಮೆಗೆ ಬಂದಿದ್ದರು. ಆಗ ನನ್ನ ಸಮಕ್ಷಮ ಏನು ಸಹ ಜಪ್ತಿ ಪಡೆಸಿಕೊಂಡಿರುವುದಿಲ್ಲ.

ನಾನು ನಿಪಿ 1 ನ್ನು ದೂರುದಾರರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಚೆಕ್ ದೂರುದಾರರ ಕಡೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ದೂರುದಾರರ 2021 ರಲ್ಲಿ ಈ ದೂರು ಸಲ್ಲಿಸಿದ ನಂತರ, ಅವರು ನನ್ನ ಚೆಕ್‌ನ ಮೇಲೆ ಪಿರ್ಯಾಧಿ ಹಾಕಿರುತ್ತಾರೆ ಎಂದು ತಿಳಿದುಕೊಂಡು ನಾನು ಅವರ ಮೇಲೆ ಯಾವುದೇ ಪ್ರಕರಣ ದಾಖಲಿಸಿರುವುದಿಲ್ಲ. ಈ ಪ್ರಕರಣ ದಾಖಲು ಆದ ಮೇಲೆ ನಾನು ಅವರಿಗೆ ಯಾವುದೇ ನೋಟಿಸ್ ನೀಡಿರುವುದಿಲ್ಲ.

ಸ್ಪೆಷಲ್ ಕೇಸ್ ನಂಃ 1393/2021 ರಲ್ಲಿ ನನ್ನ ಮೇಲೆ ದೋಷಾರೋಪಣ ಪಟ್ಟಿ ಸಲ್ಲಿಸಲಾಗಿದೆ ಎಂದರೆ ಸರಿ.

ದೂರಿನಲ್ಲಿ ತೋರಿಸಿದ ವಿಳಾಸದಲ್ಲಿ ನಾನು ವಾಸವಿರುತ್ತೇನೆ ಎಂದರೆ ಸರಿ. ದಿಃ01.03.2021 ರಂದು ದೂರುದಾರರು ಸದರಿ ವಿಳಾಸದಲ್ಲಿ ನನಗೆ ನೋಟಿಸ್

ಕಳುಹಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಮುಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ನೋಟಿಸ್ ಡೋರ್ ಲಾಕ್ ಎಂದು ವಾಪಸ್ಸು ಬಂದಿರುತ್ತದೆ ಎಂದರೆ ಸಾಕ್ಷಿಯು ನನಗೆ ಮುಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಮೇಲೆ ಸ್ಪೆಷಲ್ ಕೇಸ್ ನಂಃ1393/2021 ದಾಖಲಾದ ಮೇಲೆ ನಾನು ತಲೆಮರಿಸಿಕೊಂಡಿದ್ದೆ ಎಂದರೆ ಸರಿಯಲ್ಲ.

ನಾನು ದೂರುದಾರರಿಗೆ ಚೆಕ್ ನೀಡಿದ್ದರು ಸಹ ಅವರ ದುಡ್ಡನ್ನು ಹೊಡೆದುಕೊಳ್ಳುವ ಉದ್ದೇಶದಿಂದ ನನ್ನ ಚೆಕ್ ಕಳೆದು ಹೋಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ವಿಚಾರ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೆ.ಸರಿ.ಇದೆ.**

**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸಂಡೂರು.**